ಅವಳು ಒಂದು ಕ್ಷಣ ಸುಮ್ಮಗ ಕೂತವಳು ನಂತರ ಏನೋ ನೆನಪಾದವಳಂತೆ ಹುರುಪಾಗಿ 'ಹೋದವಾರ ನಿಮ್ಮ ಬಾಸ್ ಮನೀಮ್ಯಾಲ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ ಮ್ಯಾಲಿಂದ ನಿಮಗ ಹಿಂಗಾಗ್ಲಿಕ್ ಹತ್ಯದ ಕಾಣಸ್ತದ...' ಅಂದಳು. ಮತ್ತೆ ಕ್ಷಣ ತಡೆದು 'ನೀವು ಸುಮ್ಮಗ ಹೆದರಬ್ಯಾಡ್ರಿ. ನೀವೇನೂ ಅವರ ಹಂಗ ಕೋಟಿ ಕೋಟಿ ಹೊಡೆದಿಲ್ಲಲ್ಲ... ಉಗುಳು ನುಂಗಿದ್ರ ಹೊಟ್ಟಿ ತುಂಬ್ತದೇನು? ನೀವೇನಿದ್ರೂ ಚಿಲ್ಲರೆ ಮಂದಿ' ಅಂದವಳು ಇಷ್ಟಾದರೂ ಗಂಡ ಇನ್ನೂ ಮಾತಾಡದುದು ನೋಡಿ ಸಹಿಸಲಾಗದೆ 'ಈಗ ಆರಾಮಿದ್ದೀರಲ್ಲಾ?' ಕೇಳಿದಳು.

'ನಂಗೇನೂ ಆಗಿಲ್ಲೇ...' ಅವನು ಆಶ್ವಾಸನೆ ಕೊಟ್ಟ.

'ಹುಂ.' ಅವಳಿಗೂ ಎದಿ ಹಗುರಾದ ಭಾಸ.

ಭಾಳ ದಿವಸದ ಮ್ಯಾಲ ಅದ್ಯಾಕೋ ದಾರಿ ತಪ್ಪಿ ಬಂದ ಹೆಂಡತಿಯ ಸಾನಿಧ್ಯ ಶರಣಪ್ಪನಿಗೆ ಪ್ರಿಯವೆನಿಸಲಿಕ್ಕೆ ಹತ್ತಿದ್ದರಲ್ಲಿ ಅಚ್ಚರಿ ಏನಿರಲಿಲ್ಲ. ಅವಳಿನ್ನೂ ತನ್ನ ಹತ್ತಿರವೇ ಸ್ವಲ್ಪ ಹೊತ್ತು ಕೂತಿರಲಿ ಎಂದವನು ಆಸೆಪಟ್ಟ. ಏನಾದರೂ ಮಾತಾಡಬೇಕೆಂದರೆ ಅದೇ ಹೊಳೆಯುತ್ತಿಲ್ಲ. ಹೆಚ್ಚು ಮುಂದುವರಿದರೆ ಮುಗಿಸಿಕೊಂಡು ಎದ್ದು ಹೋಗಿಬಿಟ್ಟಾಳು ಎಂಬ ಆತಂಕ ಬ್ಯಾರೆ. 'ಏನಾರೂ ಮಾತಾಡು' ಅಂದ. ಅವಳಿಂದ ಏನಾದರೊಂದಿಷ್ಟು ಸರಸದ ನಿರೀಕ್ಷೆ ಮಾಡಿದರೆ ಅವಳು ತಟ್ಟನೆ ಸಡಗರದಿಂದ ಮಾರಿ ಅರಳಿಸಿ 'ನಮ್ಮ ಮಂಜು ಪರೀಕ್ಷಾದೊಳಗ ಛಲೋ ಮಾರ್ಕ್ಸ್ ತೊಗೊಂಡಾನಲ್ಲಾ' ಅಂದಳು.

'ಹೌದು ನಂಗೊತ್ತದ' ಅಂದ ನೀರಸವಾಗಿ.

'ಅವನ್ನ ಡಾಕ್ಟರು ಮಾಡಬೇಕು ಅಂಬೋದು...' ಹೆಂಡತಿಯ ಮುಂದುವರೆದ ಆಶಾವಾದ ತಡೆಯುತ್ತ ಶರಣಪ್ಪ ತಟ್ಟನೆ 'ಊಹು ಖರೇವಂದ್ರೂ ಅವನ್ನ ಡಾಕ್ಟರಂತೂ ಮಾಡಲಾರೆ' ಎಂದು ಕೈಯಾಡಿಸಿ ಬಿಟ್ಟ. ಅವಳಿಗೆ ತುಸು ಮುಖಭಂಗ–ತುಸು ಸಂದೇಹಪಟ್ಟು ಬಿಡದವಳಂತೆ ಕೇಳಿದಳು. 'ಯಾಕs ಮನೀವಳಗ ಒಬ್ಬ ಡಾಕ್ಟರ್ ಇದ್ರೆ ಛಲೋ ಅಲ್ಲೇನು?'

'ಡಾಕ್ಟರಂತೆ ಡಾಕ್ಟರು' ಶರಣಪ್ಪ ಅಸಮಾಧಾನದಿಂದ ಹೇಳಿದ 'ದಿನಾ ಬೆಳಗಾದರೆ ಎಲ್ಲರ ಮುಕುಳಿ ನೋಡೋದು ಎಂಥ ಹೀನಾಯ!'

'ಹುಚ್ಚುಚ್ಚಾರ ಏನರೇ ಹೇಳಬ್ಯಾಡ್ರಿ...'

'ಖರೇನs...' ಹೆಂಡತಿ ಕನಲಿದ್ದಕ್ಕೆ ಪ್ರತಿಯಾಗಿ ಅವನು ಇನ್ನಷ್ಟು ಪ್ರಾಮಾಣಿಕವಾಗಿ ವಿವರಿಸತೊಡಗಿದ. 'ಮೂಲವ್ಯಾಧಿ ಅಂದ್ರ ನಿಂಗೊತ್ತದ ಏನು? ಸಂಡಾಸಿಗೆ ಹೋಗೂದಂದ್ರ ಸಾಕು, ಮೈಯೊಳಗ ತಲ್ಲಣ ಸುರುವಾಗಿಬಿಡ್ತದ. ಕೂತ ಮ್ಯಾಲ ತಿಣುಕಿ ತಿಣುಕಿ ಇನ್ನೇನು ಒತ್ತರಿಸಿ ಬಂತು ಅನ್ನೊದ್ರೊಳಗ ಒಮ್ಮಲೇ ಒಳಗ ಜಾಲಿಕಂಟಿ ಆಡಿಸಿದ ಹಂಗಾಗಿ ಆ ನೋವಿಗೆ ಬೆಚ್ಚಿ, ಚೀತ್ಕರಿಸಿ ಸಟ್ಟನೆ ಎದ್ದು ನಿಲ್ಲದೆ ವಿಧೀನೇ ಇಲ್ಲ... ಎಂಥ ಘೋರ ಹಿಂಸೆ ಅಂತೀ.'

'ನಿಮ್ಮ ಅನುಭವ ಹೇಳಬ್ಯಾಡ್ರಿ...'

ಶರಣಪ್ಪ ಸಂಕಷ್ಟನಾಗಿ ತೆಪ್ಪಗೆ ಕೂತ. ಮನಸಿನೊಳಗೆ ಮಾತ್ರ ಹೆಂಡತಿ ಕೇಳದಿದ್ರೆ ಏನಾತು ಎಂದು ರೋಗದ ಬವಣೆ, ಪರಿತಾಪ ಸಾಗಿಯೇಬಿಟ್ಟಿತು ಬರೇವಾದ್ರೂ ಅವನಿಗೆ ತನ್ನ ರೋಗದ ಬಗ್ಗೆ ಹೇವರಿಕೆ ಹುಟ್ಟಿದ್ದೇನೂ ಸುಳ್ಳಲ್ಲ. ಛೀ– ಈ ದೇಹದೊಳಗ ಎಲ್ಲೆಲ್ಲಿ ಏನೇನು ರೋಗಗಳೋ! ಡಾಕ್ಟರರ ಹತ್ರ ಹೋದ ಕೂಡ್ಲೆ 'ಬಿಚ್ರಿ' ಅನ್ನುತ್ತಿದ್ದರು. ಅವರ ಮುಂದೆ ಮುಕುಳಿ ಮೇಲೆ ಮಾಡಿ ಮಲಗೋದು ಎಂಥ ಮುಜುಗರದ ಕೆಲಸ! ಆದರೆ ವಿಧಿ ಇಲ್ಲ. ಅಲ್ಲ, ತೋರಿಸಲಿಕ್ಕೆ ತನಗೇ ಈ ಪಾಟಿ ಅಸಂಯ್ಯ ಆಗುತಿದ್ರ, ಪಾಪ, ನೋಡಲೇ ಬೇಕಾದ ಕರ್ಮಕ್ಕೆ ಅವರಿಗೆ ಇನ್ನೆಷ್ಟು ಕಸಿವಿಸಿ